# ದಾಸ್ಯ ಭಕ್ತಿ



✿ ಭಕ್ತನ ಭಾವ ಯಾವ ರೀತಿಯದು ಗೊತ್ತೆ? ಆತನ ಭಾವ : 'ಹೇ ಭಗವಂತ, ನೀನು ಪ್ರಭು, ನಾನು ನಿನ್ನ ದಾಸ. ನೀನು ತಾಯಿ, ನಾನು ನಿನ್ನ ಮಗು' ಎಂಬುದಾಗಿ. ಮತ್ತೆ: 'ನೀನು ನನ್ನ ತಾಯಿ, ತಂದೆ; ನೀನು ಪೂರ್ಣ, ನಾನು ಅಂಶ' ಎಂಬುದಾಗಿ. ಭಕ್ತ 'ನಾನೇ ಬ್ರಹ್ಮ' ಎಂಬುದಾಗಿ ಹೇಳಲು ಎಂದಿಗೂ ಇಚ್ಛೆ ಪಡುವುದಿಲ್ಲ.

✿ ಸೇವ್ಯ-ಸೇವಕ ಭಾವವೇ ಒಳ್ಳೆಯದು, 'ಅಹಂ' ಎಂಬುದು ಪೂರ್ಣವಾಗಿ ಹೋಗದೆ ಇರುವುದರಿಂದ ಆ ನೀಚಮುಂಡೇದು 'ದಾಸ ಅಹಂ' ಆಗಿ ಉಳಿದುಕೊಂಡಿರಲಿ.

✿ ಪ್ರಶ್ನೆ: ''ಒಳ್ಳೇದು, ಯಾರ 'ಅಹಂ' 'ದಾಸ ಅಹಂ' ಆಗಿರುವುದೋ ಅವರ ಕಾಮ ಕ್ರೋಧಾದಿಗಳ ಸಮಾಚಾರವೇನು?''

ಶ್ರೀರಾಮಕೃಷ್ಣರು: ''ಮನುಷ್ಯನಿಗೆ ನಿಜವಾಗಿ ಆ ಭಾವ ಬಂದಿರುವುದಾದರೆ, ಆತನಲ್ಲಿ ಕಾಮಕ್ರೋಧಾದಿಗಳ ಕೇವಲ ಸೋಗು ಉಳಿದುಕೊಳ್ಳುತ್ತದೆ. ಭಗವಂತನ ಸಾಕ್ಷಾತ್ಕಾರ ದೊರೆತ ನಂತರ ಆತನಲ್ಲಿ 'ದಾಸ ಅಹಂ' ಅಥವಾ 'ಭಕ್ತ ಅಹಂ' ಉಳಿದುಕೊಂಡರೆ, ಆತ ಯಾರಿಗೂ ಕೇಡುಕನ್ನು ತರಲಾರ. ಕತ್ತಿ ಸ್ಪರ್ಶ ಮಣಿಯನ್ನು ಮುಟ್ಟಿದ ನಂತರ ಚಿನ್ನವಾಗಿಬಿಡುತ್ತದೆ. ಕತ್ತಿಯ ಆಕಾರವೇನೋ ಹಾಗೆಯೇ ಉಳಿದುಕೊಳ್ಳುತ್ತದೆ. ಆದರೆ ಅದು ಯಾವುದನ್ನೂ ಕತ್ತರಿಸಲಾರದು.

✿ ಆತನ ಸಾಕ್ಷಾತ್ಕಾರ ಮಾಡಿಕೊಳ್ಳಬೇಕಾದರೆ ಯಾವುದಾದರೂ ಒಂದು ಭಾವವನ್ನು ಆಶ್ರಯಿಸಿಕೊಳ್ಳಬೇಕಾಗುತ್ತದೆ—ಶಾಂತ, ದಾಸ್ಯ, ಸಖ್ಯ, ವಾತ್ಸಲ್ಯ, ಮಧುರ ಇವುಗಳಲ್ಲಿ ಯಾವುದಾದರೂ ಒಂದನ್ನು.

ದಾಸ್ಯ—ಹನುಮಂತನದು. ರಾಮನ ಕೆಲಸ ಮಾಡುತ್ತಿರುವಾಗ ಸಿಂಹಪರಾಕ್ರಮಿಯಾಗುತ್ತಿದ್ದ. ಸತಿಯಲ್ಲೂ ಈ ಭಾವ ಇರುತ್ತದೆ—ಪ್ರಾಣಾಪಾಯವನ್ನು ಲೆಕ್ಕಿಸದೆ ಪತಿಸೇವೆ ಮಾಡುತ್ತಾಳೆ. ತಾಯಿಯಲ್ಲೂ ಇದು ಅಲ್ಪಸ್ವಲ್ಪ ಇರುತ್ತದೆ—ಯಶೋದೆಯಲ್ಲಿ ಇದ್ದ ಹಾಗೆ.

✿ ಎಲ್ಲೋ ಕೆಲವರಿಗೆ ಮಾತ್ರ ಸಮಾಧಿಯುಂಟಾಗಿ ಈ 'ಅಹಂ' ಎಂಬುದು ಹೊರಟುಹೋಗುವುದೇನೋ ನಿಜ; ಆದರೆ ಇದು ಪ್ರಾಯಿಕವಾಗಿ ಹೋಗುವುದಿಲ್ಲ. ಸಾವಿರ ವಿಚಾರ ಮಾಡು, 'ಅಹಂ' ತಿರುತಿರುಗಿ ಬಂದುಬಿಡುತ್ತದೆ. ಅಶ್ವತ್ಥ ವೃಕ್ಷವನ್ನು ಚೆನ್ನಾಗಿ ಬುಡದವರೆಗೆ ಕತ್ತರಿಸಿಹಾಕಿಬಿಟ್ಟು ಮಾರನೆ ದಿನ ಹೋಗಿ ನೋಡಿದರೆ, ಆಗಲೇ ಅದು ಚಿಗುರಿಬಿಟ್ಟಿರುತ್ತದೆ.

ನೀನು ಬದುಕಿಕೊಂಡಿರುವವರೆಗೆ, 'ಹೇ ಭಗವಂತ, ನೀನು ಪ್ರಭು, ನಾನು ದಾಸ' ಎಂಬ ಭಾವದಿಂದ ಬದುಕಿಕೊಂಡಿರು. 'ನಾನು ದಾಸ,' 'ನಾನು ಭಕ್ತ' ಎಂಬ 'ಅಹಂ' ಕೆಡುಕಾದ 'ಅಹಂ' ಏನಲ್ಲ. ಸಿಹಿ ತಿಂದರೆ ಹೊಟ್ಟೆಯಲ್ಲಿ ಹುಳಿ ಅಧಿಕವಾಗುವುದೇನೋ ನಿಜ. ಆದರೆ ಕಲ್ಲುಸಕ್ಕರೆ ಸಿಹಿಪದಾರ್ಥಗಳ ಗುಂಪಿಗೆ ಸೇರಿಲ್ಲ.

✿ ಒಂದು ಗಳುವಿನ ತುಂಡು ತೆಗೆದುಕೊಂಡು ನೀರಿನ ಮೇಲೆ ಗೆರೆ ಎಳೆದೆ ಅಂತ ಇಟ್ಟುಕೊ. ನೀರು ಇಬ್ಭಾಗವಾದ ಹಾಗೆ ಕಾಣುತ್ತದೆ. ಆದರೆ ಆ ಗೆರೆ ಹೆಚ್ಚುಕಾಲ ನಿಲ್ಲದು. 'ದಾಸ ಅಹಂ', 'ಭಕ್ತ ಅಹಂ', 'ಬಾಲಕ ಅಹಂ' ಇವು 'ಅಹಂ'ನ ಗೆರೆ ಮಾತ್ರ.

✿ ಕೆಲವರು ಸಮಾಧಿ ದೊರೆತ ನಂತರವೂ 'ಭಕ್ತ ಅಹಂ' ಅಥವಾ 'ದಾಸ ಅಹಂ' ಇವನ್ನು ಇಟ್ಟುಕೊಂಡಿರುತ್ತಾರೆ. ಭಕ್ತ 'ಭಕ್ತ ಅಹಂ' ಇಟ್ಟುಕೊಂಡಿರುತ್ತಾನೆ. ಆತ ಹೇಳುತ್ತಾನೆ: 'ಹೇ ಭಗವಂತ, ನೀನು ಪ್ರಭು, ನಾನು ದಾಸ; ನೀನು ಭಗವಂತ, ನಾನು ಭಕ್ತ.' ಭಗವಂತನ ಸಾಕ್ಷಾತ್ಕಾರ ದೊರೆತ ನಂತರವೂ ಈ ಭಾವ ಆತನಲ್ಲಿರುತ್ತದೆ. ಆತನ 'ಅಹಂ' ಪೂರ್ಣವಾಗಿ ಹೊರಟುಹೋಗದು. ಈ ವಿಧದ ಭಾವವನ್ನು ಕಾರ್ಯತಃ ಆಚರಣೆಗೆ ತರುತ್ತ ತರುತ್ತ ಕೊನೆಗೆ ಭಗವಂತನ ಸಾಕ್ಷಾತ್ಕಾರ ದೊರೆತುಬಿಡುತ್ತದೆ. ಇದಕ್ಕೇ ಭಕ್ತಿಯೋಗ ಅಂತ ಹೆಸರು.

✿ 'ನಾನು ದಾಸ, ನಾನು ಸೇವಕ' ಎಂಬ ಇದೊಂದಿಷ್ಟು 'ಅಹಂ' ಇರುವುದು ಒಳ್ಳೆಯದು. ಎಲ್ಲಿಯವರೆಗೆ ಮನುಷ್ಯನಿಗೆ ಎಲ್ಲವನ್ನೂ ತಾನು ಮಾಡುವುದು ಎಂಬ ಭಾವನೆ ಇರುವುದೊ ಅಲ್ಲಿಯವರೆಗೆ ಆತನಿಗೆ ತಾನು ದಾಸ, ಭಗವಂತ ಪ್ರಭು ಎಂಬ ಭಾವನೆ ಇರುವುದು ಒಳ್ಳೆಯದು. ಎಲ್ಲವನ್ನೂ ಮಾಡುತ್ತಿರುವವನು ತಾನೇ ಎಂಬ ಭಾವನೆ ಇರುವವರೆಗೆ ಸೇವ್ಯಸೇವಕ ಭಾವದಿಂದಿರುವುದೇ ಒಳ್ಳೆಯದು.

✿ ಭಕ್ತ ಭಗವಂತನನ್ನು ಸಂಬೋಧಿಸಿ ಹೇಳಬೇಕು: 'ನೀನು ತಾಯಿ, ನಾನು ನಿನ್ನ ಸಂತಾನ; ನೀನು ಪ್ರಭು, ನಾನು ನಿನ್ನ ದಾಸ.' ಸೇವ್ಯ-ಸೇವಕಭಾವವೇ ಶ್ರೇಯಸ್ಕರ. ಈ ದಾಸಭಾವದಿಂದ ಉಳಿದ ಭಾವಗಳು—ಶಾಂತ, ಸಖ್ಯ ಇತ್ಯಾದಿ—ಉದ್ಭವವಾಗುತ್ತವೆ. ಯಜಮಾನ ದಾಸನನ್ನು ಪ್ರೀತಿಸುವಾಗ ಬೇಕಾದರೆ ಆತ ಹೇಳಬಹುದು: 'ಬಾ, ನನ್ನ ಹತ್ತಿರ ಕುಳಿತುಕೊ; ನನಗೂ ನಿನಗೂ ಯಾವ ಭೇದವೂ ಇಲ್ಲ.' ಆದರೆ ದಾಸ ಏಕಾಏಕಿ ಯಜಮಾನನ ಹತ್ತಿರ ಕುಳಿತುಕೊಳ್ಳಲು ಹೋದರೆ, ಯಜಮಾನನಿಗೆ ಕೋಪ ಬರುವುದಿಲ್ಲವೆ?

**ಶ್ರೀರಾಮಕೃಷ್ಣ ವಚನವೇದದಿಂದ**